# ಅಪಥ್ಯ

■ ಬಿ.ಪಿ. ಶಿವಾನಂದರಾವ್



ಕುಂಟುತ್ತ ಬಂದಂತೆ ಕೊಂಕಣ ರೈಲು ನೇತ್ರಾವತಿ ಅಂತೂ ಬೆಳಿಗ್ಗೆ ಹನ್ನೊಂದರ ಹೊತ್ತಿಗೆ ಕುಮಟಾ ತಲುಪಿತು ಅಂತಾಯ್ತು. ಜನರ ಗಜಿಬಿಜಿ ಅಷ್ಟಿಲ್ಲ. ಅವಸರದಲ್ಲೇ ಅನಂತಯ್ಯ ಕೈಯಲ್ಲಿ ಸೂಟ್‌ಕೇಸ್ ಹಿಡಿದಾಗ, ಭವಾನಿ ವೈರ್ ಬ್ಯಾಗ್ ಹಿಡಿದು ಇಬ್ಬರೂ ರೈಲಿನಿಂದಿಳಿದರು. ಸ್ಟೇಷನ್ ಹೊರಗೆ ಮೈ ತೂಗಿದಂತೆ ಮಾಡುತ್ತ ಇಬ್ಬರೂ ಬಂದರೆ ಆಗಲೇ ಕೊನೆಯ ರಿಕ್ಷಾ ಹೊರಡೋ ತರಾತುರಿ ಎಂಬಂತಿದೆ. ಅನಂತಯ್ಯ ಕೈ ಸನ್ನೆ ಮಾಡಿ ನಿಲ್ಲುವಂತಂದು ಅಂತೂ ಚಿತ್ರಿಗೆಯ ತಮ್ಮ ಬಾಡಿಗೆ ಮನೆ ಮುಟ್ಟಿದಾಗ ನಡು ಮಧ್ಯಾಹ್ನದ ಬಿಸಿಲ ಝಳಝಳ ನೆತ್ತಿ ಕೆತ್ತುವಂತಿದೆ.

ಬೀಗ ತೆರೆದು ಫ್ಯಾನ್ ಹಾಕಿದರೆ ಕರೆಂಟಿಲ್ಲ! ಬಾಗಿಲು–ಕಿಟಕಿ ತೆರೆದು ಆರಾಮ್ ಕುರ್ಚಿಯಲ್ಲಿ ತೆರೆದೆದೆ ಪ್ರದರ್ಶಿಸುವಂತೆ ಅನಂತಯ್ಯ ಟವೆಲ್ ಗಾಳಿ ಸೇವಿಸುತ್ತ, ನಿಟ್ಟುಸಿರಿಟ್ಟು 'ಎರ್ಡು ಊಟ ತಕ್ಕಂಡ್ಬಾಂತ ಮಧುರಾ ಹೊಟೇಲ್‌ಗೆ ಫೋನ್ ಮಾಡ್ತೀನಿ' ರಾಗ ಎಳೆದಂದರು. ಫೋನ್ ಮಾಡಿಯಾಯ್ತು, ಪಕ್ಕನೆ ಉಮೇದೆಲ್ಲ ಪಾತಾಳಕ್ಕೆ ಕುಸಿದ್ಹೋದಂತೆ 'ನಾನ್ ಏನ್ ಅಂದಿದ್ದೆ.. ನಿಂಗೆ ನಾ ಮಾತಾಡಿದ್ರೆ ಸಿಟ್ಟು ಬರ್ತದೆ ಭವಾನಿ... ನಾ ಹೇಳಿದ್ದು ಸತ್ಯ ಆಯ್ತಲ್ಲಾ.. ಇನ್ನೀ ಜನ್ಮದಾಗೆ ಬೆಂಗ್ಳೂರ್ ಅನ್ನೋ ಶಬ್ದ ನಿನ್ನೀ ಹರಕು ಬಾಯಿಂದ ಉಚ್ಚಾರ ಮಾಡ್‌ಬ್ಯಾಡಾ... ನಮ್ಗೀ ಕುಮ್ಟೆ ಬಾಡಿಗೆ ಮನೆನೆ ಗತಿ... ಇಲ್ಲೇ ಬದುಕೋದು ಇಲ್ಲೇ ಸಾಯೋದು. ಅರ್ಥ ಆಯ್ತಾ?'

ದುರುಗುಟ್ಟಿ ನೋಡುತ್ತ ಹೆಂಡತಿಗೆ ಬಿಟ್ಟ ವಾಗ್ಬಾಣಕ್ಕೆ ಭವಾನಿ ಉಸಿರೆತ್ತಲಿಲ್ಲ. ಅವಳಿಗೂ ಗೊತ್ತು ಇವ್ರ ಜೊತೆ ಬಾಳ್ವೆ ಮಾಡ್ತಾ ಮಾಡ್ತಾ ಮುವ್ವತ್ ವರ್ಷ ಕಳೆದೆ.... ಇನ್ನೆಷ್ಟು ವರ್ಷಾನೋ ಇಂಥ ಸಂಕ್ಟದ್ದು ಬದ್ಕು?' ಅನ್ನಿಸ್ತು, ಆ ಕಡೆ ಸೆಕೆ, ಈ ಕಡೆ ಗಂಡನ ವಾಕ್ಪ್ರವಾಹ ಮತ್ತೊಂದು ಕಡೆ ಹೊಟ್ಟೆ ಹಸಿವು. ಉಡುಪಿಲ್ಲೇ ನಾಕಾರು ಇಡ್ಲಿನೋ ಪಲಾವೋ– ವಡೆ ಗಿಡೇಂತಾ ಸ್ಟೇಷನ್ನಲ್ಲಿ ಕಟ್ಟಿಸ್ಕೊಂಡ್ಬನ್ನಿ ಅನ್ಬೇಕಾಗಿತ್ತು. ಡಯಾಬಿಟೀಸ್ ಇರೋ ಇವ್ರೇ ಮುರುಡೇಶ್ವರದಲ್ಲಿ ಕುಳಿತು ತಪಶ್ಚರ್ಯೆ ಮಾಡ್ತಿರೋ ಶಿಲೆಯ ಶಿವನ ಮೂರ್ತಿ ಥರಾ ಕುಂತ್ಬಿಟ್ರು. ಆ ನಿನ್ನೆಯ ಪೇಪರ್‌ನಲ್ಲಿ ಏನ್ ನ್ಯೂಸ್ ಸುಡ್ಗಾಡು ಬಂದಿತ್ತೋ, ಈಗ ದಿನ ಬೆಳಗಾದ್ರೆ ಪತ್ರಿಕೇಲಿ ಸಣ್ಣಪುಟ್ಟ ವಿಷಯಕ್ಕೂ ಜಗಳ–ದೊಂಬಿ–ಹೊಡೆದಾಟ ಜಾತಿ ಹೆಸ್ರಲ್ಲಿ ಗುಂಪು ಘರ್ಷಣೆ...ವಾಹನ ಅಪಘಾತ... ನಿಷ್ಪಾಪಿ ಜನ್ರ ಹಣ ಲಪಟಾವಣೆ, ಹೆಂಗಸ್ರ ಸರ ದೋಚೋದು ಇಂಥಾವೇ ಭಯಾನಕ ಸುದ್ದಿಗಳಲ್ವಾ? ಅಂತಾನೂ ಅನ್ನಿಸ್ತು. 'ಪರಿಹಾರ ಜನಾನೇ ಹುಡುಕೋಬೇಕು' ಅಂತಾನೂ ಅನ್ನಿಸ್ತು.

ಒಬ್ಬನೇ ಮುದ್ದಿನ ವಂಶೋದ್ಧಾರಕ ಮಗ ಮೋಹನನ ಮನೆ ಮಲ್ಲೇಶ್ವರದ ಹದಿಮೂರನೇ ಕ್ರಾಸ್‌ನಲ್ಲಿ ಅಂತಾ ಹೋದರೆ... ಆ ಕಥೆ ಆಗ ಉಮೇದಿನಲ್ಲೇ ಅನಂತಯ್ಯಗೆ ಮನಸ್ಸಿಲ್ಲ. ಭವಾನಿ ಹಟ ಮಾಡಿ ಹೊರಡಿಸಿದ್ದ ಹಕೀಕತ್ತದು. ಒಂದ್